**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ.1530/2023**

**ಪಿರ್ಯಾದುದಾರರು** ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

**-ವಿರುದ್ದ-**

**ಆರೋಪಿ/ತರು** ಃ ಮುರುಗೇಶ್ ಮತ್ತು ಇತರರು

**-ಃದೋಷಾರೋಪಣೆಃ-**

**ಶ್ರೀ ವೈದ್ಯ ಶ್ರೀಕಾಂತ್,** ಬಿ.ಎಸ್ಇ, ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

1. ಮುರುಗೇಶ ಬಿನ್ ಲೇಟ್ ಮಣಿ, 40 ವರ್ಷ, ಕೂಲಿ ಕೆಲಸ,, ವಾಸಃಗಂಟೆಕಣಿವೆ, ತರೀಕೆರೆ ತಾಃ
2. ಮಂಜುಳ ಕೋಂ ಮುರುಗೇಶ, 38 ವರ್ಷ, ಮನೆಕೆಲಸ, ವಾಸಃ ಕಣಿವೆ ಗ್ರಾಮ, ತರೀಕೆರೆ ತಾಃ
4. ಮಡ್ಡಿಕುಮಾರ ಬಿನ್ ರಾಮಚಂದ್ರ, 45 ವರ್ಷ, ಕೂಲಿ ಕೆಲಸ, ವಾಸಃಗಂಟೆಕಣಿವೆ ಗ್ರಾಮ, ತರೀಕೆರೆ ತಾಃ
5. ರಂಗನಾಥ ಬಿನ್ ಕುಪ್ಪುಸ್ವಾಮಿ, 45 ವರ್ಷ ಕೂಲಿ ಕೆಲಸ, ವಾಸಃಗಂಟೆಕಣಿವೆ, ತರೀಕೆರೆ ತಾಃ
6. ಸುಧಾ ಬಿನ್ ಕಾಂತರಾಜು, 36 ವರ್ಷ, ಕೂಲಿ ಕೆಲಸ, ವಾಸಃಗಂಟೆಕಣಿವೆ, ತರೀಕೆರೆ ತಾಃ

ಆದ ನಿಮ್ಮ ವಿರುದ್ದ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿಃ06.07.2023 ರಂದು ಮಧ್ಯಾಹ್ನ 1-00 ಗಂಟೆಯಿಂದ 2-00 ರ ಸಮಯದಲ್ಲಿ ತರೀಕೆರೆ ಪೊಲೀಸ್ ಠಾಣಾ ಸರಹದ್ದಿನ ಹೆಚ್ ರಂಗಾಪುರ

ಸರ್ವೇ ನಂ.11.09 ಮತ್ತು ಹುರಳಹಳ್ಳಿ ಸರ್ವೇ ನಂ.60 ರಲ್ಲಿನ ಒಟ್ಟು 115 ಹೆಕ್ಟರ್ ಎಂ ಪಿ ಎಂ ಗೆ ಸೇರಿ ಅರಣ್ಯ ಪ್ರದೇಶದಲ್ಲಿ ನಡುತೋಪು ಇದ್ದು, ಸದರಿ ರಕ್ಷಣಾ ಪ್ರದೇಶದಲ್ಲಿ ಚಾಸಾ-1 ರವರು ಕರ್ತವ್ಯ ನಿರ್ವಹಿಸುತ್ತಿರುವಾಗ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದಿದ್ದು, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ.143 ಸಹಕಲಂ 149** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ದೊಂಬಿ ಮಾಡಿದ್ದು, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ.147 ಸಹಕಲಂ 149** ರ ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ಸದರಿ ಅರಣ್ಯ ಪ್ರದೇಶಕ್ಕೆ ಅತೀಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ.447 ಸಹಕಲಂ 149** ರ ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಆರೋಪಿತರಾದ ನೀವು ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ.504 ಸಹಕಲಂ 149** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಚಾಸಾ-1 ರವರಿಗೆ ಕೈಯಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು ಆ ಮೂಲಕ ನೀವು

**ಭಾರತೀಯ ದಂಡ ಸಂಹಿತೆಯ ಕಲಂ.323 ಸಹಕಲಂ 149** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ23.07.2024

Sd/-
ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ.

ಪ್ರಃ 1)ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ ಎ-1

ಎ-2

ಎ-4

ಎ-5

ಎ-6

ಪ್ರಃ 2)ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ ಎ-1

ಎ-2

ಎ-4

ಎ-5

ಎ-6

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ23.07.2024

Sd/-
ಹಿ. ಪ್ರಧಾನ ಪ್ರ.ದ.ನ್ಯಾ.ದಂ ತರೀಕೆರೆ.

ಆರೋಪಿತರ ಸಹಿಃ